# ಕರ್ನಾಟಕ ವಿಧಾನ ಪರಿಷತ್ತು

**ಶ್ರೀ ಗೋವಿಂದರಾಜು. ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು ನಿಯಮ 72ರ ಮೇರೆಗೆ ಸೂಚನೆ ಸಂಖ್ಯೆ:30ಕ್ಕೆ ಮಾಹಿತಿ.**

**ಪ್ರಶ್ನೆ:**

ಕೋಲಾರ ನಗರದಲ್ಲಿರುವ ಕೋಲಾರಮ್ಮ ಅಮಾನಿ ಕೆರೆಯ ಅಭಿವೃದ್ಧಿಗಾಗಿ ಇನ್ಫೋಸಿಸ್ ಸಂಸ್ಥೆಯು ಸಿ.ಎಸ್.ಆರ್ ಅನುದಾನದಲ್ಲಿ 17 ಕೋಟಿ ಅನುದಾನ ಬಿಡುಗಡೆಗೊಳಿಸಿದ್ದು, ಕೆರೆಯ ಅಭಿವೃದ್ಧಿ ಜವಾಬ್ದಾರಿಯನ್ನು ಆನಂದ ಮಲ್ಲಿಗವಾಡ್ ಫೌಂಡೇಷನ್ ಸಂಸ್ಥೆಗೆ ಒಪ್ಪಿಸಿದೆ. ಆದರೆ ಕಾಮಗಾರಿಗೂ ಮುಂಚೆ ಸಕ್ಷಮ ಪ್ರಾಧಿಕಾರದಿಂದ ಡಿಪಿಆರ್‌ಗೆ ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಅನುಮೋದನೆ ಪಡೆಯುವಂತೆ ಸೂಚಿಲಾಗಿತ್ತು. ಆದರೆ, ಕೆರೆ ಸಂರಕ್ಷಣಾ ಪ್ರಾಧಿಕಾರದಿಂದ ಅನುಮತಿ ಪಡೆಯದೇ ಅವೈಜ್ಞಾನಿಕ ಕಾಮಗಾರಿ ನಡೆಸುತ್ತಿರುವ ಬಗ್ಗೆ ಸಾರ್ವಜನಿಕರಿಂದ ಸಾಕಷ್ಟು ದೂರುಗಳು ಬಂದಿದ್ದರು ಜಿಲ್ಲಾಡಳಿತ ಮಾತ್ರ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಅವೈಜ್ಞಾನಿಕವಾಗಿ ನಡೆಯುತ್ತಿರುವ ಕಾಮಗಾರಿಯಿಂದ ಮಳೆ ಬಂದರೆ ಕೆರೆ ನೀರು ಹರಿದು ತುಂಬಿದಾಗ ಕೆರೆಗೆ ಹೊಂದಿರುವ ಸುತ್ತ-ಮುತ್ತಲಿನ ನಿವಾಸಿಗಳಿಗೆ ಅಪಾಯ ಇರುವ ಕುರಿತು.

**ಉತ್ತರ:**

ಕೋಲಾರ ನಗರದ ಕೋಲಾರ ಅಮಾನಿಕೆರೆಯ ಅಭಿವೃದ್ಧಿ ಕಾಮಗಾರಿಯನ್ನು ಇನ್ಫೋಸಿಸ್ ಸಂಸ್ಥೆಯ ಸಿ.ಎಸ್.ಆರ್ ಅನುದಾನದಲ್ಲಿ ಕೈಗೊಳ್ಳಲು ಶ್ರೀ ಆನಂದ್ ಮಲ್ಲಿಗೆವಾಡ್ ಪೌಂಡೇಶನ್ ಮತ್ತು ಟ್ರಸ್ಟಿ ಮಲ್ಲಿಗೆವಾಡ್ ಪೌಂಡೇಶನ್ ಸಂಸ್ಥೆಯವರು ದಿನಾಂಕ : 21.01.2023 ರಂದು ಕಾರ್ಯಪಾಲಕ ಅಭಿಯಂತರರು ರವರಿಗೆ ಮನವಿ ಸಲ್ಲಿಸಿದ್ದು, ಸಣ್ಣ ನೀರಾವರಿ ಇಲಾಖೆಯಿಂದ ಕೈಗೊಳ್ಳಲಾಗಿರುವ ಕೆರೆಯ ಅಭಿವೃದ್ಧಿ ಕಾಮಗಾರಿಗಳನ್ನು ಹೊರತುಪಡಿಸಿ ಕಾಮಗಾರಿಗಳು ಪುನರಾವರ್ತನೆಯಾಗದಂತೆ ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ ರವರು ಕೆಲವು ಷರತ್ತುಗೊಳ್ಳಪಟ್ಟು ದಿನಾಂಕ : 07.02.2023 ರಂದು ಯೋಜನಾ ವರದಿಗೆ ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಅನುಮೋದನೆಯನ್ನು ಪಡೆದು ಕ್ರಮವಹಿಸಲು ಪತ್ರವನ್ನು ನೀಡಿರುತ್ತಾರೆ.

ಪತ್ರದಲ್ಲಿ ತಿಳಿಸಿರುವಂತೆ ಕ್ರಮವಹಿಸದೇ ಕಾಮಗಾರಿಯನ್ನು ಪ್ರಾರಂಭಿಸಿದ್ದು, ಕೋಲಾರ ಅಮಾನಿ ಕೆರೆಯಲ್ಲಿ ಸಿ.ಎಸ್.ಆರ್ ಅನುದಾನದಲ್ಲಿ ನಡೆಯುತ್ತಿರುವ ಕಾಮಗಾರಿಯ ಬಗ್ಗೆ ಯೋಜನಾ ವರದಿಯನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯದೇ ಕೆರೆಯಲ್ಲಿನ ಹೂಳನ್ನು ಹಾಗೂ ಕೆರೆಯ ಮೂಲ ಭೂಮಿಯ ಮೇಲ್ಮೈಯನ್ನು ಅಗೆದು ಕೆರೆಯ ಅಂಚಿನಲ್ಲಿ ಬಂಡ್ ನ್ನು ನಿರ್ಮಿಸಿ ಕೆರೆಗೆ ಬರುತ್ತಿರುವ ಕೊಳಚೆ ನೀರನ್ನು ಹೊರಸಾಗಿಸಲು ಕ್ರಮವಹಿಸಲಾಗುತ್ತಿದೆ. ಅದನ್ನು ವಿಶಿಷ್ಟ ವಿವರಣೆಗಳಿಗನುಸರವಾಗಿ ಹಾಗೂ ವಿನ್ಯಾಸಕ್ಕೆ ತಕ್ಕಂತೆ ನಿರ್ಮಿಸುತ್ತಿಲ್ಲವೆಂದು ನಿಯಮಾನುಸಾರ ಅನುಮೋದಿತ ಯೋಜನಾ ವರದಿಯಂತೆ ಕಾಮಗಾರಿಯನ್ನು ನಿರ್ವಹಿಸಲು ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ ರವರು ದಿನಾಂಕ : 06.02.2024, 04.11.2023, 11.10.2023 16.09.2023 ರನ್ವಯ ಶ್ರೀ ಆನಂದ್ ಮಲ್ಲಿಗೆವಾಡ್ ಪೌಂಡೇಶನ್ ಮತ್ತು ಟ್ರಸ್ಟಿ ಮಲ್ಲಿಗೆವಾಡ್ ಪೌಂಡೇಶನ್ ಸಂಸ್ಥೆರವರಿಗೆ ತಿಳಿಸಲಾಗಿರುತ್ತದೆ.

ಪ್ರಸ್ತುತ ಸದರಿ ಕಾಮಗಾರಿಯನ್ನು ನಿರ್ವಹಿಸದಂತೆ ತಿಳಿಸಲಾಗಿದ್ದು, ಅದರಂತೆ ಕಾಮಗಾರಿಯನ್ನು ಶ್ರೀ. ಆನಂದ್ ಮಲ್ಲಿಗವಾಡ್ ಫೌಂಡರ್ ಮತ್ತು ಟ್ರಸ್ಟೀ ರವರು ದಿ: 20.06.2024 ರಂದು ನಿಲ್ಲಿಸಿರುತ್ತಾರೆ.

ಇನ್ಫೋಸಿಸ್ ಸಂಸ್ಥೆ, ಬೆಂಗಳೂರು ರವರು ನೀಡಿರುವ ಸಿ.ಎಸ್.ಆರ್ ಅನುದಾನದಲ್ಲಿ ಎನ್.ಜಿ.ಓ ಸಂಸ್ಥೆರವರು ಸಣ್ಣ ನೀರಾವರಿ ಇಲಾಖೆಗೆ ಸೇರಿದ ಕೋಲಾರ ಅಮಾನಿ ಕೆರೆಯಲ್ಲಿ ಯಾವುದೇ ಡಿ.ಪಿ.ಆರ್‌ಗೆ ಅನುಮೋದನೆಯಿಲ್ಲದೇ ಕೆರೆಯ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಂಡಿದ್ದು ಇವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಕೋರಿ ಸ್ವೀಕೃತವಾದ ಮನವಿಯ ಮೇರೆಗೆ ದಿನಾಂಕ : 17.04.2024 ಮತ್ತು 04.05.2024 ರಂದು ಕೆರೆ ಅಭಿವೃದ್ಧಿ ಪ್ರಾಧಿಕಾರದ ಅಭಿಯಂತರರು ಕೆರೆಯನ್ನು ಪರಿವೀಕ್ಷಿಸಿರುತ್ತಾರೆ. ಕೆರೆಯ ಅಂಚಿನಲ್ಲಿ ಕೊಳಚೆ ನೀರು ಕೆರೆಗೆ ಹರಿಯದಂತೆ Diversion ಕಾಲುವೆಯನ್ನು ಕೆರೆ ಕೋಡಿಯಿಂದ ಪ್ರಾರಂಭಿಸಿ ಕೆರೆಯ ಅಂಚಿನಲ್ಲಿ ಸುಮಾರು 2.5 ಕಿ.ಮೀ ಉದ್ದಕ್ಕೆ ಕೆರೆಯಲ್ಲಿನ ಮಣ್ಣಿನಿಂದ ಏರಿಯನ್ನು ನಿರ್ಮಿಸಲಾಗಿರುತ್ತದೆ. ಕೆರೆಯಲ್ಲಿನ ಮಣ್ಣನ್ನು 5 ಅಡಿಗಳಿಂದ 8 ಅಡಿಗಳ ಆಳದವರೆಗೆ ತೆಗೆದು Diversion ನಾಲೆಯ ಏರಿಯನ್ನು ಹಿಟಾಚಿ ಯಂತ್ರದಿಂದ ನಿರ್ಮಿಸಲಾಗುತ್ತಿದೆ. ಯಾವುದೇ ವಿಶಿಷ್ಟ ವಿವರಣೆಗಳನುಸಾರ ನಿರ್ಮಿಸಿರುವುದಿಲ್ಲ. ಕೆರೆಯ ಅಂಚಿನಲ್ಲಿ ಈಗಾಗಲೇ Fencing ನಿರ್ಮಿಸಲಾಗಿದ್ದು ಕೆಲವು ಕಡೆ ಅದನ್ನು ಅತಿಕ್ರಮಿಸಿಕೊಂಡಿರುವುದನ್ನು ತೆರವುಗೊಳಿಸದೇ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಈ ಬಗ್ಗೆ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 2014 ಮತ್ತು ತದನಂತರದ ತಿದ್ದುಪಡಿಗಳ ಅಧ್ಯಾಯ-4, ಪ್ರಕರಣ 25 ಮತ್ತು 26ರನ್ವಯ ನಿಯಮಾನುಸಾರ ಕ್ರಮ ವಹಿಸಲಾಗುವುದು.

ಮುಂದುವರೆದು, ಆನಂದ್ ಮಲ್ಲಿಗೆವಾಡ್ ಫೌಂಡರ್ ಮತ್ತು ಟ್ರಸ್ಟೀ, ಮಲ್ಲಿಗೆವಾಡ್ ಫೌಂಡೇಷನ್ ಸಂಸ್ಥೆ ರವರು ದಿ:14-08-2024 ರಂದು ಡಿ.ಪಿ.ಆರ್‌ನ್ನು ಸಲ್ಲಿಸಿದ್ದು, ಡಿ.ಪಿ.ಆರ್‌ನ್ನು ಸಮುಚಿತ ಮಾರ್ಗದಲ್ಲಿ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ, ರವರಿಗೆ ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ. ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ರವರು ಸದರಿ ಡಿ.ಪಿ.ಆರ್‌ನ್ನು ಪರಿಶೀಲಿಸಿ ಕೆಲವೊಂದು ತಾಂತ್ರಿಕ ನ್ಯೂನ್ಯತೆಗಳನ್ನು ಸರಿಪಡಿಸಲು ಸೂಚಿಸಿರುವ ಹಿನ್ನೆಲೆಯಲ್ಲಿ ತಾಂತ್ರಿಕ ನ್ಯೂನ್ಯತೆಗಳನ್ನು ನಿಯಮಾನುಸಾರ ಪರಿಶೀಲಿಸಿ ಪರಿಷ್ಕರಿಸಿ, ಕೂಡಲೇ ಸದರಿ ಪರಿಷ್ಕೃತ ಡಿ.ಪಿ.ಆರ್ ಗೆ ಅನುಮೋದನೆ ಪಡೆದುಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

ಕಡತ ಸಂಖ್ಯೆ: MID/129/LCQ/2024

(ಎನ್.ಎಸ್ ಭೋಸರಾಜು)
ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವರು